ಸಾಕ್ಷಿಯನ್ನು ದಿನಾಂಕಃ **17-12-2018** ರಂದು ಕರೆಯಿಸಿ ಪ್ರಮಾಣ ವಚನ ನೀಡಲಾಯಿತು.

ಶ್ರೀ ಹೆಚ್.ಎಂ.ಪಿ. ವಕೀಲರು ಜೆ.ಸಿ.ಜಿ. ವಕೀಲರ ಪರವಾಗಿಸ ಾಕ್ಷಿಯ ಪಾಟೀಸವಾಲಿಗೆ ಕಾಲಾವಕಾಶ ಕೋರಿದ್ದು ಈಗಾಗಲೇ ಸಾಕಷ್ಟು ಕಾಲಾವಕಾಶ ನೀಡಿರುವುದರಿಂದ ಹಾಗೂ ಕಾಲಾವಕಾಶ ನೀಡಲು ಯಾವುದೇ ಸೂಕ್ತ ಕಾರಣವನ್ನು ನೀಡದೇ ಇರುವುದರಿಂದ 1 ಮತ್ತು 2 ನೇ ಪ್ರತಿವಾದಿಯರ ಪರವಾಗಿ ಸಾಕ್ಷಿಯ ಪಾಟೀಸವಾಲನ್ನು ಇಲ್ಲ ಎಂದು ಎಂದು ತೆಗೆದುಕೊಳ್ಳಲಾಯಿತು.

3 ನೇ ಪ್ರತಿವಾದಿಯ ಪರವಾಗಿ ಸಾಕ್ಷಿಯ ಪಾಟೀಸವಾಲಿಗಾಗಿ ಪ್ರಕರಣವನ್ನು ಕಾಯ್ದಿರಿಸಲು ಶ್ರೀ ಕೆ.ಎ.ಬಿ. ವಕೀಲರು ಕೋರಿದ್ದು ಪ್ರಕರಣವನ್ನು ಕಾಯ್ದಿರಿಸಲಾಯಿತು

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿಯಿದೆ.

ಸಿವಿಲ್ ಜಡ್ಜ ಹರಪನಹಳ್ಳಿ

ಪುನಃ ಸಾಕ್ಷಿಯನ್ನು 4.00 ಗಂಟೆಗೆ ಕರೆಯಿಸಿ ಪ್ರಮಾಣ ವಚನ ನೀಡಲಾಯಿತು.

ಪಾಟೀಸವಾಲು 3 ನೇ ಪ್ರತಿವಾದಿ ಪರ ವಕೀಲರಾದ ಶ್ರೀ ಜಿ.ಬಿ.ಎಂ. ರವರ ಪರವಾಗಿ ಶ್ರೀ ಕೆಎ.ಬಿ. ವಕೀಲರಿಂದಃ

ಕೊಂಗನಹೊಸೂರು ಗ್ರಾಮದ ಸ.ನಂ, 57/ಪಿ1 ರಲ್ಲಿ ಒಟ್ಟು 8 ಎಕರೆ 41 ಸೆಂಟ್ಸ ಜಮೀನು ಇದೆ ಎಂದರೆ ಸರಿ. ವಾದಿಗೆ 4 ಎಕಟೆ 70 ಸೆಂಟ್ಸ ಜಮೀನು ಇದೆ ಎಂದರೆ ಸರಿ. ಸದರಿಯವರು ಸದರಿ ಸ್ವತ್ತಿನ್ನ ಮಾಲೀಕರು ಮತ್ತು ಸ್ವಾಧೀನದಾರರು ಎಂದರೆ ಸರಿ. ಮೃತ 3 ನೇ ಪ್ರತಿವಾದಿಯು ಸದರಿ ಸ.ನಂ.ನ ಲ್ಲಿ 3 ಎಕರೆ 71 ಸೆಂಟ್ಸ ಜಮೀನಿಗೆ ಮಾಲೀಕರು ಮತ್ತು ಸ್ವಾಧೀನದಾರರು ಎಂದರೆ ಸರಿ. ಕೊಂಗನಹೊಸೂರು ಗ್ರಾಮದಿಂದ ಮುಸುಕಿನ ಕಲ್ಲಹಳ್ಳಿ ಗ್ರಾಮಕ್ಕೆ ತಲುಪಲು ಸ.ನಂ. 51, 61, 59, 60, 27, 18, 19 ಮತ್ತು 17 ರಲ್ಲಿ ಬಂಡಿ ದಾರಿ ಇದೆ ಎಂದು ನಕಾಶೆಯಲ್ಲಿ ತೋರಿಸಿರುತ್ತಾರೆಂದರೆ ಸರಿ. 1 ಮತ್ತು 2 ನೇ ಪ್ರತಿವಾದಿಯರ ಜಮೀನಿನ ಸ.ನಂ. 30 ಮತ್ತು 31 ಎಂದರೆ ಸರಿ. ಸದರಿ ಜಮೀನಿಗೆ ತಲುಪಲುಸ.ನಂ. 17 ದಾಟಿದ ತರುವಾಗಯ ದಕ್ಷಿಣ ದಿಕ್ಕಿನಲ್ಲಿ ಒಂದು ತಿರುವು ಇದೆ ಎಂದರೆ ಸರಿ. ಸದರಿ ಸ.ನಂ. 17 ರಲ್ಲಿ ಹಾದು ಹೋಗಿರುತ್ತದೆ ಎಂದರೆ ಸರಿ.

ಪ್ರತಿವಾದಿಗಳು ಸ.ನಂ. 30 ಮತ್ತು 31 ನ್ನು ವಿಭಾಗ ಮಾಡಿಕೊಂಡಿರುತ್ತಾರೆಂದರೆ ಸರಿ. ಕೊಂಗನಹೊಸೂರು ಗ್ರಾಮದಿಂದ ಕೆಂಚಮ್ಮನಹಳ್ಳಿಗೆ ಹೋಗಲು ಇನ್ನೊಂದು ಬಂಡಿ ದಾರಿ ಇದೆ ಎಂದರೆ ಸರಿ. ಸದರಿ ದಾರಿಯು ಸ.ನಂ. 51, 53, 33, 32 ಮತ್ತು 31 ರ ಮೂಲಕ ಹಾದುಹೋಗುತ್ತದೆ ಎಂದರೆ ಸರಿ. ಸದರಿ ಜಮೀನಿನ ಮುಖಾಂತರ 1 ಮತ್ತು 2 ನೇ ಪ್ರತಿವಾದಿಯರು ಅವರ ಜಮೀನನ್ನು ತಲುಪಲು ಅದೇ ಬಂಡಿ ದಾರಿ ಮೂಲಕ ತಲುಪುತ್ತಾರೆಂದರೆ ಸರಿ. ದಾವಾ ಆಸ್ತಿಯ ಪಶ್ಚಿಮ ದಿಕ್ಕಿಗೆ ನಗೆ ಸೇರಿದ ಆಸ್ತಿ ಇದೆ ಎಂದರೆ ಸರಿ. ಸದರಿ ಆಸ್ತಿಯ ಸ.ನಂ. 51 ಎಂದರೆ ಸರಿ. ಸದರಿ ಆಸ್ತಿ ನನ್ನ ತಂದೆಯಿಂದಲೇ ಬಂದಿರುತ್ತದೆ ಎಂದರೆ ಸರಿ.

ಮರು ವಿಚಾರಣೆಃ ಇಲ್ಲ.

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮ್ಹಾಡಲಾಯಿತು.)**

**ಓ ಹೇ ಕೇ ಸರಿಯಿದೆ.**

**ಸಿವಿಲ್ ಜಡ್ಜ ಹರಪನಹಳ್ಳಿ**